ಲವಲವಿಕೆಯಿಂದಿದ್ದ ಗೆಳತಿಯನ್ನು ನೋಡಿದಳು ಋತು.

ಟೆರೇಸ್ ಮೇಲಿನಿಂದ ಸುತ್ತಲಿನ ಪರಿಸರ ಸುಂದರವಾಗಿ ಕಂಗೊಳಿಸತೊಡಗಿತ್ತು. ಆಗಷ್ಟೇ ಸೂರ್ಯಾಸ್ತವಾಗಿದ್ದರಿಂದ ಪೂರ್ತಿ ಪರಿಸರ ಹೊಂಬಣ್ಣದಲ್ಲಿ ಮಿಂದಿತ್ತು. ಮಾವಿನ ತೋಪು, ಅದರಾಚೆ ಭವ್ಯವಾಗಿ ತಲೆಯೆತ್ತಿ ನಿಂತಿರುವ ನಂದಿಬೆಟ್ಟ ಕಣ್ಮನ ಸೆಳೆಯತೊಡಗಿದ್ದವು. ತಂಪುಗಾಳಿ ರುಮು ರುಮು ಎಂದು ಬೀಸುತ್ತಾ ಮಾವಿನ ಮರದ ಎಲೆಗಳನ್ನು ಚಾಮರವಾಗಿಸಿತ್ತು. ತಂಗಾಳಿಯ ಅಲೆಯಲ್ಲಿ ತೇಲತೊಡಗಿದ ಅನುಭವವಾಗತೊಡಗಿದಾಗ ತನ್ಮಯತೆಯಿಂದ ಋತು ಕಣ್ಮುಚ್ಚಿದಳು. ಈಗ ಹೇಮಂತ ತನ್ನ ಜೊತೆಯಲ್ಲಿದ್ದರೆ....ತನ್ನನ್ನು ಅಪ್ಪಿ ಮುದ್ದಾಡಿ ಪೂರ್ತಿ ಪರಿಸರವನ್ನು ಶೃಂಗಾರಮಯವನ್ನಾಗಿ ಮಾಡಿ ಬಿಡುತ್ತಿದ್ದ ತುಂಟ.

'ಋತು, ಹೇಮಂತನ ನೆನಪಾಗ್ತಿದ್ಯಾ, ಈ ಪ್ರಕೃತಿಯ ಸೊಬಗೇ ಹಾಗೆ, ನಮ್ಮ ಭಾವನೆಗಳನ್ನು ಕೆರಳಿಸಿ ಬಿಡುತ್ತೆ, ನಿಂಗೆ ಹೇಮಂತನ ನೆನಪು ಬಂದ ಹಾಗೆ ನಂಗೆ ನನ್ನ ದುರಂತ ದಾಂಪತ್ಯದ ನೆನಪು ಬರ್ತಿದೆ ಕಣೇ, ಇವತ್ತು ಎಲ್ಲವನ್ನೂ ನಿನ್ನ ಮುಂದೆ ಹೇಳಿ ಹಗುರವಾಗ್ಬೇಕೂಂತ ಅನ್ನಿಸ್ತಿದೆ, ಕೇಳ್ತಿಯ ಅಲ್ವಾ?'

ಅನಿರೀಕ್ಷಿತವಾಗಿ ಇಂಥ ಮಾತನಾಡಿದ ಗೆಳತಿ ರಮ್ಯಾಳತ್ತ ಋತು ಆಶ್ಚರ್ಯದಿಂದ ನೋಡತೊಡಗಿದಳು. ರಮ್ಯಳ ದೃಷ್ಟಿ ಎದುರಿಗೆ ಕಾಣುತ್ತಿದ್ದ ನಂದಿಬೆಟ್ಟದತ್ತ ನೆಟ್ಟಿತ್ತು.

## ರಮ್ಯಾಳ ದುರಂತ ಕಥೆ

'ಋತು, ದೂರದ ಬೆಟ್ಟ ನುಣ್ಣಗೆ ಅನ್ನೋ ಗಾದೇನ ನೀನೂ ಕೇಳಿರ್ಬೇಕಲ್ಲ, ನನ್ನ ಲೈಫಿನಲ್ಲಿ ಅದು ನಿಜವೇ ಆಯ್ತು. ಈಗ ನಾಲ್ಕು ವರ್ಷಗಳ ಹಿಂದಿನ ಮಾತು. ನಾನು ಆಗಷ್ಟೇ ಎಂ.ಎಸ್ಸಿ ಮುಗಿಸಿ ಕೆಲಸ ಹುಡುಕುವುದರಲ್ಲಿದ್ದೆ. ಕಾಲೇಜಿನಲ್ಲಿ ಲೆಕ್ಚರರ್ ಆಗಬೇಕೆಂದು ನನ್ನ ಕನಸು. ಅದೇ ಪ್ರಯತ್ನದಲ್ಲಿದ್ದಾಗಲೇ ಅಪ್ಪಾಜಿ ಪ್ರವೀಣನ ಸಂಬಂಧವನ್ನು ನನಗಾಗಿ ಹುಡುಕಿದ್ದರು. ಅವನು ಚಿಕ್ಕಬಳ್ಳಾಪುರದ ಕಾಲೇಜೊಂದರಲ್ಲಿ ಲೆಕ್ಚರರ್ ಆಗಿದ್ದವನು. ಅಪ್ಪಾಜಿಗೆ ಯೋಗ ಶಿಬಿರವೊಂದರಲ್ಲಿ ಆತನ ಪರಿಚಯವಾಗಿದ್ದಂತೆ. ನನಗೂ ನನ್ನ ಮದುವೆಯ ಬಗ್ಗೆ ಅಂಥ ಹೊಂಗನಸುಗಳೇನೂ ಇರಲಿಲ್ಲ. ಜೊತೆಗೆ ಅಪ್ಪಾಜಿಯನ್ನು ಒಂಟಿಯಾಗಿ ಬಿಟ್ಟು ಹೋಗಬೇಕಲ್ಲ ಎಂಬ ಸಂಕಟ. ಅಲ್ಲದೆ ನಾನು ಲೆಕ್ಚರರಾಗಿ ನಾಲ್ಕಾರು ವರ್ಷ ದುಡಿದು ಆ ನಂತರ ಮದುವೆಯಾಗಬೇಕೆಂಬ ಹಂಬಲವೂ ಇತ್ತು. ಆದರೆ ನನ್ನ ಯಾವ ಮಾತುಗಳಿಗೂ ಅಪ್ಪಾಜಿ ಒಗೊಟ್ಟಿರಲಿಲ್ಲ.

'ರಮ್ಯ, ಪ್ರವೀಣ ಒಳ್ಳೆಯ ಹುಡುಗ, ಸಭ್ಯಸ್ಥ. ಅವನ ಹೆತ್ತವರೂ ನಂಗೆ ಚೆನ್ನಾಗಿಯೇ ಗೊತ್ತು. ಅವರು ಗೌರಿಬಿದನೂರಿನ ಹತ್ತಿರದ ಹಳ್ಳಿಯೊಂದರಲ್ಲಿ ಮನೆ, ಜಮೀನು ಅಂತೆಲ್ಲಾ ಮಾಡಿಕೊಂಡು ಚೆನ್ನಾಗಿಯೇ ಇದ್ದಾರೆ. ನನ್ನ ಯೋಚ್ನೆ ಬಿಡು, ನಾನು ಯೋಗಶಾಲೆ, ವಿದ್ಯಾರ್ಥಿಗಳು ಅಂತ ಬ್ಯುಸಿಯಾಗೇ ಇರ್ತೀನಿ, ನಿಂಗೆ ಬೇಕಂದ್ರೂ ಅಂಥ ಹುಡುಗ ಸಿಗಲ್ಲ, ಯೋಚ್ನೆ ಮಾಡು..' ಎಂದಿದ್ದರು ಅಪ್ಪಾಜಿ. ಕೊನೆಗೂ ಅಪ್ಪಾಜಿಯೇ ಗೆದ್ದರು. ಅವರ ಆಸೆಯಂತೆ ಪ್ರವೀಣನೊಂದಿಗೆ ಮದುವೆಗೆ ಒಪ್ಪಿದ್ದೆ. ಎಲ್ಲವೂ ಚೆನ್ನಾಗಿಯೇ ಅಂದುಕೊಂಡಂತೆಯೇ ನಡೆದಿತ್ತು. ಪ್ರವೀಣನನ್ನು ನಾನು ಮದುವೆಯಾದೆ. ಮುಂದೆ ನನ್ನ ಹೈಯರ್ ಎಜುಕೇಶನ್ನಿಗಾಗಲೀ, ಕೆಲಸಕ್ಕಾಗಲೀ ತನ್ನಿಂದ ಯಾವ ತೊಂದರೆಯೂ ಬರದೆಂದು ಅವನು ಹೇಳಿದಾಗ ನನಗೂ ಸಂತೋಷವಾಗಿತ್ತು. ಅವನ ಹೆತ್ತವರೂ ನನ್ನನ್ನು ಸಂಭ್ರಮದಿಂದ ಸೊಸೆಯಾಗಿ ಸ್ವೀಕರಿಸಿದರು. ಮೇಲ್ನೋಟಕ್ಕೆ ಎಲ್ಲವೂ ಚೆನ್ನಾಗಿಯೇ ಇತ್ತು ಋತು, ಆದ್ರೆ...'

ದೀರ್ಘವಾಗಿ ಮಾತನಾಡಿ ಅರ್ಧಕ್ಕೆ ನಿಲ್ಲಿಸಿದವಳತ್ತ ಆಶ್ಚರ್ಯದಿಂದ ನೋಡಿದಳು ಋತು. ಎಲ್ಲವೂ ಸರಿಯಾಗಿದ್ದರೂ ಏನಾಯಿತು? ಕುತೂಹಲ ಇಣುಕಿತು.

ರಮ್ಯ ಮತ್ತೆ ಮಾತಿಗೆ ತೊಡಗಿದಳು.

'ಪ್ರವೀಣನೊಂದಿಗೆ ನನ್ನ ಹೊಸಬಾಳು ಆರಂಭವಾಗಿತ್ತು. ಹನಿಮೂನಿನ ಅವಧಿಯೂ ಮಗಿದು ಅವನು ಕಾಲೇಜಿಗೆ ಹೋಗಲಾರಂಭಿಸಿದ್ದ. ನನಗೂ ಅವನ ಕಾಲೇಜಿನಲ್ಲಿಯೇ ಪಾರ್ಟ್ ಟೈಂ ಲೆಕ್ಚರರ್ ಕೆಲಸವೂ ಸಿಕ್ತು. ಅವನ ಪೇರೆಂಟ್ಸ್ ಹಳ್ಳಿಯಲ್ಲಿದ್ದುದರಿಂದ ನಾನು ಪ್ರವೀಣ ಇಬ್ರೇ, ಬದುಕನ್ನು ಹೇಗೆ ಬೇಕಾದ್ರೂ ಎಂಜಾಯ್ ಮಾಡ್ಬೋದಿತ್ತು. ಆದ್ರೆ....ಆ ಪುಣ್ಯಾತ್ಮ ಯಾವತ್ತೂ ನನ್ನನ್ನು ಹೆಂಡತಿಯ ಹಾಗೆ ನಡೆಸಿಕೊಳ್ಳಲೇ ಇಲ್ಲ. ಮಾತೂ ಕಡಿಮೆಯೇ. ಕಣ್ತಪ್ಪಿಸಿಕೊಂಡೇ ಓಡಾಡ್ತಿದ್ದ. ನಂಗಂತೂ ಏನೂ ಅರ್ಥವಾಗ್ತಿರಲಿಲ್ಲ. ಬಹಳಷ್ಟು ಸಲ ಅವನ ಮನಸ್ಸಿನಲ್ಲೇನಿದೆ ಎಂದು ತಿಳಿದುಕೊಳ್ಳಲು ಪ್ರಯತ್ನಪಟ್ಟಿದ್ದೆ. ಆದರೆ ಅವ್ನು ಯಾವುದನ್ನೂ ಬಾಯ್ಬಿಡಲಿಲ್ಲ. ಬಹುಶಃ ಅವನಿಗೆ ಬೇರೊಂದು ಹೆಣ್ಣಿನ ಜೊತೆ ಸಂಬಂಧವಿದ್ದರೂ ಇರಬಹುದೆಂದು ಯೋಚಿಸಿದ್ದೆ. ನನಗೆ ತಿಳಿದಂತೆ ಅವನು ಕಾಲೇಜಿನಲ್ಲಿ ಹೆಣ್ಮಕ್ಕಳ ಜೊತೆಯಾಗಲೀ, ಬೇರೆ ಹೆಂಗಸರ ಜೊತೆಯಾಗಲೀ ಮಾತನಾಡುತ್ತಿದ್ದುದೂ ಕಡಿಮೆಯೇ. ಅವನ ಮೇಲೆ ಸಂದೇಹ ಪಡುವುದು ನನಗೂ ಮುಜುಗರ ತರುವ ಕೆಲಸವೇ ಆಗಿತ್ತು. ಅದೇ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದ ಸುಂದರೇಶ್ ಮಾತ್ರ ಪ್ರವೀಣನಿಗೆ ಆಪ್ತನಾಗಿದ್ದ. ಇಷ್ಟು ಬಿಟ್ಟರೆ ಪ್ರವೀಣನಿಗೆ ಮತ್ಯಾರ ಬಳಿಯೂ ಹೇಳಿಕೊಳ್ಳುವಂತಹ ಫ್ರೆಂಡ್‌ಶಿಪ್ ಇರ್ಲಿಲ್ಲ. ನನ್ನ ಜೀವನದ ಕಥೇ ಯಾವುದೇ ರೋಚಕ ತಿರುವಿಲ್ಲದೆ ನಿಸ್ಸಾರವಾಗಿ ಸಾಗುತ್ತಾ ಆಗಲೇ ಆರು ತಿಂಗಳು ಕಳೆದಿತ್ತು. ಇವತ್ತಲ್ಲಾ ನಾಳೆ ಪ್ರವೀಣ ಸರಿಯಾಗಬಹುದು, ನನಗೆ ತಕ್ಕ ಸಂಗಾತಿಯಾಗಬಹುದು ಎಂಬ ನಿರೀಕ್ಷೆ ಮಾತ್ರ ನನ್ನಲ್ಲಿತ್ತು. ಆದ್ರೆ ಆ ನಿರೀಕ್ಷೆ ಒಂದು ದಿನ ಪೂರ್ತಿಯಾಗಿ ಅಳಿಸಿಹೋಯ್ತು ಋತು. ನನ್ನ ಗಂಡ ಪ್ರವೀಣನ ಇನ್ನೊಂದು ಮುಖದ ದರ್ಶನ ನನಗಾಗಲು ಮತ್ತೆ ನಾನು ಹೆಚ್ಚು ಹೊತ್ತು ಕಾಯಬೇಕಾಗಿರಲಿಲ್ಲ...'

ರಮ್ಯಳ ಕಥೆ ಕೇಳುತ್ತಿದ್ದ ಋತು ಅವಳು ಅರ್ಧಕ್ಕೆ ನಿಲ್ಲಿಸಿದಾಗ ಪ್ರಶ್ನಾರ್ಥಕವಾಗಿ ಅವಳತ್ತ ನೋಡಿದಳು.

'ಋತು, ನಂಗೆ ಮುಂದೆ ನಡೆದಿದ್ದನ್ನು ಹೇಗೆ ಹೇಳ್ಬೇಕೋ ಗೊತ್ತಾಗ್ತಿಲ್ಲ. ಒಂದು ದಿನ ಅನಾರೋಗ್ಯದ ನೆಪವೊಡ್ಡಿ ಪ್ರವೀಣ ಮನೆಯಲ್ಲೇ ಉಳಿದಿದ್ದ. ಕಾಲೇಜಿನ ಮ್ಯಾನೇಜ್‌ಮೆಂಟ್‌ನ ಮೆಂಬರ್ ಒಬ್ರು ದಿಢೀರನೆ ತೀರಿಕೊಂಡಿದ್ದರಿಂದ ಆ ದಿನ ಕಾಲೇಜಿಗೆ ರಜೆ ಕೊಟ್ಟು ಬಿಟ್ರು. ಹಾಗಾಗಿ ನಾನು ಮಧ್ಯಾಹ್ನದೊಳಗೆ ಮನೆಗೆ ಬಂದುಬಿಟ್ಟೆ. ಎಷ್ಟು ಬಾಗಿಲು ಬಡಿದ್ರೂ ಪ್ರವೀಣ ಬಾಗಿಲು ತೆಗೆಯಲಿಲ್ಲ. ಆಗಲೇ ಸುಂದರೇಶನ ಬೈಕು ಕಾಂಪೌಂಡಿನಲ್ಲಿ ನಿಂತಿರುವುದು ನನ್ನ ಗಮನಕ್ಕೆ ಬಂದಿತ್ತು. ಇಷ್ಟು ಹೊತ್ತಿನಲ್ಲಿ ಅವನೇನು ಮಾಡುತ್ತಿದ್ದಾನೆ ಇಲ್ಲಿ.. ನನಗೆ ಕುತೂಹಲವಾಗಿತ್ತು. ಎಷ್ಟೋ ಹೊತ್ತಿನ ನಂತರ ಪ್ರವೀಣ ಬಾಗಿಲು ತೆಗೆದಿದ್ದ. ಅವನ ಜೊತೆಯಾಗಿ ಬಂದು ನಿಂತಿದ್ದ ಸುಂದರೇಶನನ್ನು ನೋಡಿ ಏನೋ ಅನ್‌ನ್ಯಾಚುರಲ್ ಆಗಿ ಫೀಲ್ ಮಾಡಿದ್ದೆ. ಸುಂದರೇಶ ಏನೋ ಹಾರಿಕೆಯ ಉತ್ತರ ಕೊಟ್ಟು ಹೊರಟು ಹೋಗಿದ್ದ. ಬೆಡ್‌ರೂಮಿನಲ್ಲಿ ಅಸ್ತವ್ಯಸ್ಥವಾಗಿದ್ದ ಹಾಸಿಗೆಯನ್ನು ನೋಡಿ ಏಕೋ ಹೆದರಿಕೆಯಾಗಿತ್ತು. ಪ್ರವೀಣನನ್ನು ಈ ಬಗ್ಗೆ ಪ್ರಶ್ನಿಸಿದಾಗ ಅವನು ತಡವರಿಸಿದ್ದ. ಮತ್ತೆ ಮತ್ತೆ ಕೇಳಿದಾಗ ಬಾಯ್ಬಿಟ್ಟ. ಋತು....ನನ್ನ ಗಂಡ ಒಬ್ಬ ಸಲಿಂಗಕಾಮಿ ಕಣೇ....ಇಂಥ ವಿಷಯಗಳನ್ನು ಎಲ್ಲೋ ನ್ಯೂಸ್ ಪೇಪರುಗಳಲ್ಲಿ ಓದಿರ್ತೀವಿ.

'ವೆಸ್ಟರ್ನ್ ಕಂಟ್ರೀಸ್‌ಗಳಲ್ಲಿ ಸಲಿಂಗಕಾಮಿಗಳು ಮದ್ವೆಯನ್ನೂ ಮಾಡಿಕೊಳ್ತಾರೆ, ದತ್ತು ಮಕ್ಕಳನ್ನೂ ಪಡೀತಾರೆ, ಇದೇನೂ ಕ್ರೈಂ ಅಲ್ಲ, ಇದೊಂದು ಲೈಫ್ ಸ್ಟೈಲ್ ಅಷ್ಟೇ..' ಪ್ರವೀಣ ವಿತಂಡವಾದ ಮಾಡಿದ್ದ.

'ಎಲ್ಲೋ ಯಾರೋ ಏನೋ ಮಾಡಿದ್ರೆ ಅದನ್ನು ನಾವೂ ಮಾಡ್ಬೇಕಾ ಪ್ರವೀಣ್, ನಮ್ಮ ಮಟ್ಟಿಗೆ, ನಮ್ಮ ದೇಶದ ಮಟ್ಟಿಗೆ ಅದು ಅಪರಾಧ, ನೀವು ಏನಾದ್ರೂ ಮಾಡಿಕೊಂಡು ಹಾಳಾಗಿ ಹೋಗಿ, ಆದ್ರೆ ಮದ್ವೆ ಅನ್ನೋ ಹೆಸ್ರಲ್ಲಿ ನನ್ನೇಕೆ ಬಲಿ ಕೊಟ್ರಿ ನೀವು' ಎಂದು ನಾನು ಜೋರಾಗಿ ಅತ್ತಿದ್ದೆ.

ಅವನು ಸ್ವಲ್ಪ ಹೊತ್ತು ಮೌನವಾಗಿದ್ದ. ನಂತರ– 'ಹೌದು ರಮ್ಯ, ನಾನು ತಪ್ಪು ಮಾಡ್ಬಿಟ್ಟೆ, ನಾನು ಮದ್ವೆಯಾಗಬಾರ್ದಿತ್ತು, ಐ ಫೀಲ್ ವೆರಿ ಸಾರಿ, ನಿಂಗೆ ಡೈವೋರ್ಸ್ ಕೊಡ್ತೀನಿ, ನಿಂಗೆ ಇಷ್ಟವಾದವ್ರನ್ನು ಮದ್ವೆಯಾಗಿ ಸುಖವಾಗಿರು...' ಎಂದು ಹರಸಿದ್ದ.

'ಮತ್ತೆ ನಡೆದದ್ದೆಲ್ಲಾ ಕನಸಿನಂತಿತ್ತು, ಮ್ಯುಚ್ಯುಯಲ್ ಅಂಡರ್‌ಸ್ಟಾಂಡಿಂಗ್ ಮೇಲೆ ಆರೇ ತಿಂಗಳಿಗೆ ನನಗೆ ಅವನಿಂದ ಡೈವೋರ್ಸ್ ಸಿಕ್ತು. ತಾನು ಸಲಿಂಗಕಾಮಿ ಎಂಬುದನ್ನು ಮುಚ್ಚಿಟ್ಟೇ ಪ್ರವೀಣ ವ್ಯವಹಾರ ಮಾಡಿದ. ಲೈಂಗಿಕವಾಗಿ ಅವನು ಅಸಮರ್ಥ ಎಂಬ ಕಾರಣವನ್ನೇ ಎಲ್ಲರೂ ಒಪ್ಪಿದರು. ಅದಾದ ಮೇಲೆ ನಂದಿಯ ಹೈಸ್ಕೂಲೊಂದರಲ್ಲಿ ಎರಡು ವರ್ಷ ಕೆಲಸ ಮಾಡಿದೆ. ಜ್ಞಾನ ದೇಗುಲ ಕಾಲೇಜಿನಲ್ಲಿ ಲೆಕ್ಚರರ್ ಕೆಲಸವೂ ಕಳೆದ ವರ್ಷ ಸಿಕ್ತು. ಇಷ್ಟೇ ಋತು ನನ್ನ ಕಥೆ. ಇವತ್ತಿಗೂ ಅಪ್ಪಾಜಿಗೆ ಪ್ರವೀಣ ಸಲಿಂಗಕಾಮಿ ಎನ್ನುವ ವಿಷಯ ಗೊತ್ತಿಲ್ಲ. ನನಗೊಂದು ಒಳ್ಳೆಯ ಜೊತೆಗಾರನ್ನು ಹುಡುಕಿ ಕೊಡಬೇಕೆಂದು ಇನ್ನಿಲ್ಲದ ಪ್ರಯತ್ನ ಮಾಡ್ತಾನೇ ಇದ್ದಾರೆ.

(ಸಶೇಷ)